ಅಸಾಧ್ಯ. ಅವರ ಮೇಲೆ ನನಗೆ ಎಳ್ಳಷ್ಟೂ ಸಂಶಯವಿಲ್ಲ."

ಪೊಲೀಸರ ಪರವಾಗಿ ಸರಕಾರೀ ವಕೀಲರು ಪರಿಪರಿಯಾಗಿ ತರ್ಕಿಸಿ ಪ್ರಶ್ನಿಸಿ ಪೀಡಿಸಿದರೂ ಮುದಿಯರಿಬ್ಬರೂ ಒಂದು ಕೂದಲೆಳೆಯಷ್ಟು ಅಲುಗಲಿಲ್ಲ.

ರುದ್ರಪ್ಪನಿಗೆ ಬಿಡುಗಡೆ ಆಯಿತು.

★★★

ಬಿಡುಗಡೆಯಾಗಲು ಇನ್ನೂ ಹಲವು ಕಾರಣಗಳಿದ್ದುವು. ರುದ್ರಪ್ಪನ ಮೇಲೆ ಕುತ್ಸಿತ ಟೀಕೆ ಮಾಡಲು ಅನೇಕರು ಉಲ್ಲಾಸದಿಂದ ಸಿದ್ಧರಿದ್ದರೂ ತಾವು ಸಾಕ್ಷಾತ್ ಆ ದುರ್ಘಟನೆಯನ್ನು ಕಣ್ಣಾರೆ ಕಂಡ ಸಾಕ್ಷಿಗಳು ಎಂದು ಒಪ್ಪಿಕೊಳ್ಳಲು ನಾಚಿಕೆ. ಹಾಗೆ ಒಪ್ಪಿಕೊಂಡರೆ ತಾವು ಅಷ್ಟು ಜನರು ಗಂಡಸರು – ಪುರುಷ ಕೇಸರಿಗಳು ಇದ್ದೂ ಆ ಹುಡುಗಿಯ ಸಹಾಯಕ್ಕೆ ಬರಲು ಅಂಜಿದ ಹೇಡಿಗಳು ಷಂಡರು ನಪುಂಸಕರು ಎಂದು ಬಹಿರಂಗವಾಗಿ ಸೀಮೆಯಲ್ಲೆಲ್ಲಾ ನಗೆಗೀಡಾಗುವೆವು ಎಂಬ ಸ್ವಾಭಾವಿಕವಾದ ಭಯ. ಇಡೀ ಕೋರ್ಟೇ ತಿರಸ್ಕಾರದಿಂದ ನಕ್ಕೀತು. ಊರಿನ ಮುದುಕಿಯರೆಲ್ಲಾ ಕಟು ವಚನಗಳಿಂದ ಅಶ್ಲೀಲ ಶಬ್ದಗಳಿಂದ ಮೂದಲಿಸಿ ಉಗುಳಿ ತೆಗಳಿಯಾರು. "ಮೀಸೆ ಬೋಳಿಸು, ಕೈಗೆ ಬಳೆ ತೊಟ್ಟುಕೋ, ಮನುಷ್ಯನಲ್ಲ ಎರೆಹುಳ, ಥೂ!" ಎಂದು "ಸ್ತುತಿಸಿ"ಯಾರು.

ಅದೂ ಅಲ್ಲದೆ ಆ ಹುಡುಗಿ – ಆ ದುರ್ಘಟನೆಗೆ ಪ್ರಧಾನ ಸಾಕ್ಷಿಯಾಗಬೇಕಾಗಿದ್ದವಳು – ಯಾರು? ಎಂದು ಯಾರೂ ಹೇಳರು. "ನಮಗೆ ಗೊತ್ತೇ ಇಲ್ಲ", "ನಾವು ಅಲ್ಲಿ ಇರಲೇ ಇಲ್ಲ", "ನಾವು ಕಂಡೇ ಇಲ್ಲ" ಎಂದೇ ಸರ್ವತ್ರ ಉತ್ತರ. ಊರಿನ ಯಾವ ಒಬ್ಬ ಹುಡುಗಿಯೂ ತನ್ನ ಮೈಯ ಮೇಲೆ ಮುಂಬಯಿಯ ಪೋಕರಿ ಕೈಹಾಕಿ ಅತ್ಯಾಚಾರ ಮಾಡಲು ಯತ್ನಿಸಿದ ಎಂದು ಹೇಳಲೊಲ್ಲಳು. ಏಕೆಂದರೆ ನಮ್ಮ ವಿಕೃತ ಸಮಾಜದ ಪ್ರಣಾಳಿಯಲ್ಲಿ ಹಾಗೆ ಸತ್ಯವಾರ್ತೆಯನ್ನು ಆ ಹುಡುಗಿ ಒಪ್ಪಿಕೊಂಡರೆ ಅವಳ ಮುಖಕ್ಕೇ ಮಸಿ, ಲೋಕಾಪವಾದ ಆಗಬಹುದು. ಮುಂದಕ್ಕೆ ಅವಳಿಗೆ ವರ ದೊರೆಯುವುದು ಕಷ್ಟವಾದೀತು. ಜನರು ಬಾಯಿ ಚಪ್ಪರಿಸಿ ಕಣ್ಣು ಮಿಟುಕಿಸಿ "ಬೆಳೆದ ಹುಡುಗಿ, ಸೊಕ್ಕಿದ ಕುದುರೆಯಂತೆ ಮೈತುಂಬಿದೆ. ಅಶ್ವಮೇಧದ ತುರಗ. ಸಿನೆಮಾ ನಟಿಯ ಹಾಗೆ ಶೃಂಗಾರ ವೈಯಾರ, ಅವಳಿಂದಲೇ ಏನಾದರೂ ಓರೆನೋಟದ ಮುಗುಳು ನಗೆಯ ಪ್ರೋತ್ಸಾಹನೆ ಇದ್ದಿರಬೇಕು. ಅವಳ ತಂದೆ ತಾಯಿ ಸಡಿಲು ಬಿಟ್ಟಿರಬೇಕು" ಎಂದು ವ್ಯಾಖ್ಯಾನ ಮಾಡಿ ತಮ್ಮ ಕೊಳಕು ಮನಸ್ಸಿನ ಕಲ್ಮಶ ವಿಕಾರಗಳನ್ನು ನಾಲಗೆಯ ಚಪಲದಲ್ಲಿ ಆಸ್ವಾದಿಸಿಯೇ ಬಿಡುತ್ತಾರೆ. "ಕಟ್ಟೆ ಪುರಾಣ" ಶ್ರವಣ ಮಾಡಿಸಿಯೇ ಬಿಡುತ್ತಾರೆ.

ಇಂತಹ ಪ್ರಸಂಗಗಳಲ್ಲಿ ಸಭ್ಯರೆನ್ನಿಸಿಕೊಳ್ಳುವ ಹತ್ತು ಸಮಸ್ತರ ಮನಸ್ಸಿನಲ್ಲೂ ನಾಲಗೆಯಲ್ಲೂ ಅನುಕಂಪ ಸಹಾನುಭೂತಿಗಳ ಬದಲಾಗಿ ವಿಕೃತ ವಿಚಾರಗಳ ದುರ್ಗಂಧವೇ ಹೊರ ಹೊಮ್ಮುವುದುಂಟು. ಏಕೆಂದರೆ ದೋಷಿಗಳನ್ನು ಖಂಡಿಸಿ ದಂಡಿಸಲು ಹತ್ತು ಸಮಸ್ತರಲ್ಲಿ ಧೈರ್ಯವಿಲ್ಲ ಎದೆಗಾರಿಕೆಯಿಲ್ಲ. ಆದರೆ ನಿರ್ದೋಷಿಗಳನ್ನು ಅಣಕಿಸಿ ಹೀಯಾಳಿಸುವುದು ಅವರಿಗೆ ಅತಿ ಸುಲಭ ಮತ್ತು ಮನೋರಂಜಕವಾಗುತ್ತದೆ.

ಹೀಗೆ ಕುತ್ಸಿತ ವ್ಯಾಖ್ಯಾನ ಮಾಡುವ ಮಹಾನುಭಾವರು ಮತ್ತು ಮಹಿಷಿಗಳು ಪ್ರಾಯಶಃ ಆ ಬಡ ಹುಡುಗಿಯನ್ನು ಕಣ್ಣಾರೆ ಕಂಡದ್ದೇ ಇಲ್ಲ. ಆಕೆ ಸಣ್ಣ ಗಾತ್ರದ ಕೃಶ ಶರೀರಿಯೋ ಅಥವಾ ಬೆಳೆದ ಹೃಷ್ಟಪುಷ್ಟಾಂಗಿಯೋ ಹರಕು ಬಟ್ಟೆ ಉಟ್ಟವಳೋ ಅಥವಾ ಶೃಂಗಾರದ ಉಡುಪು ತೊಟ್ಟವಳೋ ಕಪ್ಪೋ ಬಿಳುಪೋ ಉದ್ದವೋ ಗಿಡ್ಡವೋ ಎಂದೂ ತಿಳಿಯರು. ಆದರೂ ವೃಥಾ